ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಇಟ್ಟುಕೊಂಡು ಮೇಂಟೇನ್ ಮಾಡುತ್ತಿದ್ದೇವೆ.

ಅಕ್ರಮ ಸಂಪತ್ತಿನ ಬಗ್ಗೆ "ಬಿ" ವರದಿ

168- ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಂಪತ್ತು ಹಾಗೂ ವರಮಾನಕ್ಕಿಂತ ಹೆಚ್ಚು ಆದಾಯ ಹೊಂದಿದ್ದರೆನ್ನಲಾದ ಕೆಲವು ಅಧಿಕಾರಿಗಳ ಮೇಲೆ ಲೋಕಾಯುಕ್ತರವರು ಮೊಕದ್ದಮೆಯನ್ನು ದಾಖಲು ಮಾಡಿ, ತದನಂತರ ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು?

ಇ) ಈ ರೀತಿ ಎಷ್ಟು ಅಧಿಕಾರಿಗಳ ಬಗ್ಗೆ ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್‌ನ್ನು ಲೋಕಾಯುಕ್ತೆಶವರು ಸಲ್ಲಿಸಿರುತ್ತಾರೆ (ವಿವರವನ್ನು ನೀಡುವುದು)

ಈ) ಅಧಿಕಾರಿಗಳ ಮೇಲೆ ಮೊಕದ್ದಮೆ ದಾಖಲೆ ಮಾಡುವ ಮುನ್ನ ಎಲ್ಲಾ ಕಾನೂನು ಅಂಶಗಳನ್ನು ಲೋಕಾಯುಕ್ತ ಅಧಿಕಾರಿಗಳು ಗಣನೆಗೆ ತೆಗೆದುಕೊಂಡಿರುವರೇ?

ಉ) ಹಾಗಿದ್ದರೆ, 'ಬಿ' ರಿಪೋರ್ಟ್‌ನ್ನು ತದನಂತರ, ಸಲ್ಲಿಸಲು ಕಾರಣವೇನು?

ಊ) ಮೊಕದ್ದಮೆಯನ್ನು ಸರಿಯಾಗಿ ದಾಖಲಿಸದ ಲೋಕಾಯುಕ್ತ ಅಧಿಕಾರಿಗಳ ಮೇಲೆ ಸರ್ಕಾ ಕ್ರಮ ಕೈಗೊಳ್ಳಲಾಗುವುದೇ?

ಋ) ಈ ರೀತಿಯಿಂದ ರಾಜ್ಯದ ಆಡಳಿತದ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಅಕ್ರಮ ಸಂಪತ್ತು ಹಾಗೂ ವರಮಾನಕ್ಕಿಂತ ಹೆಚ್ಚು ಆದಾಯ ಹೊಂದಿದ್ದರೆನ್ನಲಾದ ಅಧಿಕಾರಿಗಳ ವಿರುದ್ಧ ವಿವರವಾದ ತನಿಖೆ ಮಾಡಿ ತದನಂತರ ಸದರಿ ಆರೋಪವು ಸಾಬೀತಾಗಿಲ್ಲದ ಕಾರಣ ಪ್ರಕರಣವನ್ನು 'ಬಿ' ವರದಿಯನ್ನು ಸಲ್ಲಿಸಲಾಗಿದೆ.

ಇ) 30 ಜನರ ಬಗ್ಗೆ, ಆ ರೀತಿ ವರದಿ ಸಲ್ಲಿಸಲಾಗಿದೆ. ವಿವರ ಪಟ್ಟಿಯನ್ನು ಲಗತ್ತಿಸಿದೆ.

ಈ) ಹೌದು.

ಉ) 'ಆ' ಪ್ರಶ್ನೆಗೆ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಊ) ಇಲ್ಲ.

ಋ) ಇಲ್ಲ.

Statement showing the details of few cases in which "B" report has been filed by the Lokayukta (From 1-1-1991 to till to date)

Sl. No.	Name & Designation	Crime No.	Date of registration of Raid case (F.I.R)	Date on which "B" report or Closure recommended by this office.	Department mental enquiry recommended	Remarks
1	2	3	4	5	6	7
1.	Sri Gurulingaiah, S/o. Siddaramaiah Swamy, Asst. Ex. Engr. special Minor Irrigation Sub-Division, Chincholi, Gulbarga.	Cr.4/87/GLb/LAPS	10-12-1987	12-06-1991	Nil	As no case of disproporationate assets to the known sources of income of the AGO is made out.
2.	Sri H.M.Virupakshaiah, Commercial Tax Officer Gulbarga.	Cr.3/89GIb/LAPS	2-04-1989	24-06-1991	Nil	do-
3.	Sri Tukaram, Range Forest Officer Gulbarga.	Cr.2/88/GLb/LAPS	6-07-1988	17-09-1991	NIl	-do-
4.	Sri M.G. Chandrashekarappa, Executive Engineer, Gulbarga.	Cr.4/89/GLb/LAPS	2-04-1989	3-02-1992	Nil	-do-

5.	Sri M.H. Adnoor, Sub-Registrar, Hubli.	Cr.7/89 of Dharwad L.A.P.S.	3-7-1989	6-03-1991	Nil	Due to A.GO's death.
6.	Sri S.G. Chavadi Executive Engineer P.H.E. Dharwad.	Cr.5/87 Dharwad L.A.P.S.	15-06-1987	9-05-1991	Nil	As no case of disproportionate assets to the known sources of income of the AGO is made out.
7.	Sri B.Eshwarappa Asst. Commercial Tax Officer, Dharwad.	Cr.3/90 of Dharwad L.A.P.S.	19-03-1990	31-12-1991	Nil	-do-
8.	Sri F.A. Trasgar, Police Sub-Inspector Khade bazar Police Station. Belgaum.	Cr.7/88,BGm L.A.P.S.	18-07-1988	16-01-1992	Dept. Enquiry recommended for Deptl. Action under KSP (DP) Rules.	-do-
9.	Sri F.R. Jamadar, Dy. Director of Food & Civil supplies, Belgaum.	Cr.F/88/BGM/LAPS	6-06-1988	17-02-1992	Nil	-do-
10.	Sri Narayanashetty, Range Forest Officer Bhagamandala.	M.63.CR-2/90 MFR	15-05-1990	20-06-1991	NIL	The AGO expired on 4-4-91 on 26-6-91 of the P.I.K.L.A. MER Mangalore was instructed to submit "B" abate summary report to the competent Court of Law.

11.	Sri N.Achutha Rao the then Supdt.of Police, D.K.Dist., Mangalore.	M-10.Cr.1/91 MNG	19-01-1990	12-11-1991	Nil	As no case of disproportionate assets to the known sources of income of the AGO is made out.
12.	Sri U.T.Alva, Chief Conservator of Forests (Wild Life) Bangalore.	M-77/Cr-9/90 MNG	18-06-1990	30-11-1991	Nil	-do-
13.	Sri L. Bolalingappa, Asst.Engineer K.E.B, Major Works, Mysore.	M-120/Cr-20/89 MYS.	3-10-1989	16-01-1992	Nil	-do-
14.	Sri S.Danappa, Asst. Ex. Engineer (Deputation) Sericulture Department, Mysore.	Cr-1/87/CTA L.A.P.S.	21-07-9187	25-06-1991	Dept. enquiry recommended for viloation of conduct rules.	-do-
15.	Sri I.M. Shankaraiah, Executive Engineer K.H.B. Bangalore.	Cr-2/89/CTA L.A.P.S.	26-04-1989	3-09-1991	Nil	-do-
16.	Sri G.R.Chandrashekaraiah, Asst. Engineer, building Division, P.W.D., bangalore.	Cr.No.16/88	12-09-1988	16-05-1991	Deptl. Enqury recommended for violation of conduct rules.	-do-

17.	Sri B.S.Patil, IAS., Secretary to Govt., C&I Department, M.S. Building, Bangalore.	Cr. 23/90	10-10-1990	18-04-1991	Deptl. Enquiry. recommended for violation of conduct rules.	As no case of disproport ionate assets to the known sources of incme of the AGO is made out.
18.	Sri J.Alexander, IAS., Secretary to Govt. Finance Department, Vidhana Soudha, Bangalore.	Cr-14/90 22-06-1990	28-11-1991	Nil	-do-	
19.	Sri R.V. Venkataramaiah, Section Supdt. and P.A. to Chairmann, B.D.A. Bangalore.	Cr.5/88	2-03-1988	7-03-1991	Nil	-do-
20.	Sri M.Krishnappa, Special Officer, O/O the Director of Health and Family services, Ananda Rao Circle, Bangalore.	Cr-22/89	25-08-1989	1-04-1991	Nil	-do-
21.	Sri B. Srinivasaiah, Asst. Commercial Tax Officer, Intelligence, Mysore.	Cr-3/90 MYS.	19-03-1990	17-05-1991	Nil	"B" final report submitted as no case was made out.

22.	Sri Munirathnam Naidu P.S.I.Bharathinagar Police Station, Bangalore.	Cr. 28/89	7-12-1989	4-11-1991	D.F. for violation of conduct rules.	It is recommended for a Departmental Enquiry for violaation.
23.	Smt. Janaki Murali, Ist Dn. Assistant B.D.A., Bangalore.	Cr. 21/90	12-9-1990	3-01-1992	Nil	Disproportionate Assets not made out.
24.	Sri Govindappa, Second Dvn. Assistant Revenue Section, Bangalore Development Authority, Bangalore.	Cr. 20/90	12-09-1990		Departmental enquiry for violation of conduct rules.	During the course of investigation it has disclosed that the AGO has got 18% excess expenditure over his known sources of income which was marginal and hence it was not fit case for charge sheet. It was recommended for a Departmental Enquiry for his excess expenditure.
25.	Sri B.R.Raju, Deputy Director of Town Planning, B.C.C. Bangalore.	Cr. 3/89	4-02-1989	2-05-1991	Nil	Disproportionate Assets not made out.

26.	Sri Puttanna, Senior Health Inspector BCC,Binnypet Division, Bangalore.	Cr-27/89	29-11-1989	21-2-1991	Recommended for action taken under Rule 12 of KCS (CCA) rules.	Disproportionate Assets not made out.
27.	Sri H.Lakshminarasappa, Inspector of Motor Vehicle Humanabad Check-post, Humanabad, Bidar District.	Cr-13/87	29-08-1987	19-09-1991	Nil	As no case of dispropotionate assets to the known sources of income of the AGO is made out.
28.	Sri Puttaraju, Range Forest Officer Karnataka Forest Plantation Corporation, Aranya Bhavan, Malleswaram, Bangalore.	Cr-7/88	22-03-1988	31-05-1991	Departmental Enquiry recommended for violation fo conduct rules.	-do-
29.	Smt.Neeraja Rajkumar,IAS. the then Managing Director of KSTDC, Bangalore.	Cr-26/88	02-11-1988	19-09-1991	Nil	-do-
30.	H.Nagaraja Shetty,IAS Managing Director, KMF, Bangalore.	Cr-9/90	19-04-1990	-4-11-1990	Departmental enquiry recommended for vio lation of conduct rules.	As no case of Dis proportinate assets to the known sources of income of the AGO is made out.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದೊಂದು ಒಟ್ಟು ವ್ಯವಸ್ಥೆಯ ಪ್ರಶ್ನೆ. ಲೋಕಾಯುಕ್ತವನ್ನು ರಚನೆ ಮಾಡುವಂಥ ಕಾಲದಲ್ಲಿ ಆಡಳಿತದಲ್ಲಿ ಅಧಿಕಾರಿಗಳು ಮಾಡತಕ್ಕಂಥ ಅವ್ಯವಹಾರವನ್ನು ಸ್ವಲ್ಪ ಮಟ್ಟಿಗೆ ಪತ್ತೆ ಹಚ್ಚತಕ್ಕಂಥ ಮತ್ತು ಅದರ ವ್ಯಾಪ್ತಿಗೆ ವಿವಿಧ ಇಲಾಖೆಗಳಿಗೆ ಹೊರತುಪಡಿಸಿಯೂ ಕೂಡ ಶಾಸನಸಭೆಯಲ್ಲಿ ಕೆಲಸ ಮಾಡತಕ್ಕಂಥ ಮತ್ತು ಪರಿಷತ್ತು ಮಂತ್ರಿಮಂಡಲ ಕೆಲಸ ಮಾಡತಕ್ಕಂಥ ಸಮಸ್ಯೆ ಕೂಡ ಒಳಗೊಂಡಿದೆ. ಆದರೆ, ಈ ಉತ್ತರ ನೋಡಿದರೆ ಸುಮಾರು 30 ಜನರ ಮೇಲೆ ಲೋಕಾಯುಕ್ತದವರು ಅಕ್ರಮ ಸಂಪತ್ತು ಹಾಗೂ ವರಮಾನಕ್ಕಿಂತ ಹೆಚ್ಚು ಆದಾಯವನ್ನು ಹೊಂದಿದ್ದ ಕಾರಣಕ್ಕಾಗಿ ತನಿಖೆ ಮಾಡಿದ್ದಾರೆ. ಎಲ್ಲಿಯೂ ಆರೋಪ ಸಾಬೀತಾಗಲಿಲ್ಲವೆಂದು 'ಬಿ' ರಿಪೋರ್ಟ್ ಕೊಡುತ್ತಾರೆ. ಮೊಟ್ಟಮೊದಲು ಇಂತಹ ಒಂದು ವಿಚಾರಣೆಯನ್ನು ಜವಾಬ್ದಾರಿ ಇರತಕ್ಕಂಥ ಅಧಿಕಾರಿಗಳ ಮೇಲೆ ಮಾಡುವ ಮುನ್ನ ಅತಿ ಜವಾಬ್ದಾರಿಯಿಂದ ಲೋಕಾಯುಕ್ತದವರು ಕೆಲಸ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಈ ಪ್ರಶ್ನೆಯನ್ನು ನಾನು ಕೇಳಿದೆ. ಮೊದಲು ವಿವರವಾಗಿ ತನಿಖೆ ಮಾಡದೆ ಅನಂತರ ವಿವರವಾದ ತನಿಖೆಯನ್ನು 'ಬಿ' ಮಾಡಿಹಾಕತಕ್ಕಂಥ ಪ್ರವೃತ್ತಿ ಇದೆಯಲ್ಲ, ಇದರೊಂದಿಗೆ ನಾನು ಪ್ರಶ್ನೆಯ ಕೊನೆಯಲ್ಲಿ ಕೇಳಿದ್ದೇನೆ. ಏನೆಂದರೆ, ಆಡಳಿತದ ಮೇಲೆ ನೇರ ದುಷ್ಪರಿಣಾಮ ಬೀರುವುದಿಲ್ಲವೇ ಎಂದು. ಬಹಳಷ್ಟು ಜನ ಸೀನಿಯರ್ ಆಫೀಸರ್ಸ್ ಮೇಲೆ ಇನ್‌ವೆಸ್ಟಿಗೇಶನ್‌ಗಿಂತ ಮುಂಚೆ ಬಿ ರಿಪೋರ್ಟ್ ಕೊಡುತ್ತಾರೆ. ಈ ಮಧ್ಯೆ ವಿಚಾರಣೆಗೆ ಮುನ್ನ ಮಾಡಿದಂಥ ತನಿಖೆಗೂ 'ಬಿ' ರಿಪೋರ್ಟ್ ಅನ್ನು ಕೊಡುವುದಕ್ಕೂ ತದನಂತರ ಮಾಡತಕ್ಕಂಥ ತನಿಖೆಗೂ ಇರತಕ್ಕಂಥ ವ್ಯತ್ಯಾಸ ಏನು? ಮೊದಲು ಮೂಲಭೂತವಾಗಿ ಯಾರಾದರೂ ಪತ್ರ ಬರೆದ ತಕ್ಷಣ ಕೇಸ್ ರಿಜಿಸ್ಟರ್ ಮಾಡುತ್ತಾರೆಯೇ? ಅದಾದನಂತರ ವಿವರವಾಗಿ ತನಿಖೆ ಮಾಡಿ ವರದಿ ಸಲ್ಲಿಸುತ್ತಾರೆಯೇ? ಅಥವಾ ಇಂತಹ ಕೇಸ್‌ಗಳನ್ನು ದಾಖಲು ಮಾಡುವುದಕ್ಕೆ ಇನ್ನು ಯಾವ ರೀತಿಯ ಪ್ರೊಸೀಜರ್ ಫಾಲೋ ಮಾಡುತ್ತೀರಿ? ಎಂಬುದರ ಬಗ್ಗೆ ತಿಳಿಸುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ತಮಗೆಲ್ಲಾ ಗೊತ್ತಿರುವ ಹಾಗೆ ಇರತಕ್ಕಂಥ ಕಾನೂನು ವ್ಯವಸ್ಥೆ ನಮ್ಮಲ್ಲಿ ಏನಿದೆ ಅದು ಹಲವಾರು ವರ್ಷಗಳಿಂದ ಬದಲಾವಣೆಯಾಗದೆ ಇದೆ. ಅದರಿಂದ ಉಪಯೋಗ ಎಷ್ಟಿದೆ, ಏನು ಎನ್ನತಕ್ಕಂಥ ಮಾತು ಚರ್ಚಾಸ್ಪದವಾಗಿ ಒಂದೊಂದು ಸಾರಿ ಉಳಿದಿದೆ ಎನ್ನತಕ್ಕಂಥಾದ್ದು ನನ್ನ ಭಾವನೆ. ತಾವು ಏತಕ್ಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದೀರಿ ಎನ್ನುವುದು ನನಗೆ ಅರ್ಥವಾಗುತ್ತದೆ. supposing a man has got lot of properties dis-proportionate to his known source of income. ಆ ಕಾರಣದಿಂದ ನಾವು ರೈಡ್ ಇತ್ಯಾದಿ ಅಥವಾ ಲೋಕಾಯುಕ್ತ ಅಧಿಕಾರಿಗಳ ಪಿ.ಸಿ. ಆಕ್ಟ್ ಪ್ರಕಾರ ಮಾಡಿದರೆ (ಪ್ರಿವೆನ್‌ಷನ್ ಆಫ್ ಕರಪ್ಷನ್ ಆಕ್ಟ್) ಜನರ ದೃಷ್ಟಿಯಲ್ಲಿ ಏನಾಗುತ್ತದೆಂದರೆ, ಇವನು ಅಪರಾಧ ಮಾಡಿದ್ದಾನೆ ಎನ್ನತಕ್ಕಂಥ ಭಾವನೆ ಬಂದುಬಿಡುತ್ತದೆ. ಆದರೆ, ನಮ್ಮ ಕಾನೂನು ಏನು ಹೇಳುತ್ತದೆ ಎಂದರೆ, ಅವನು ಎಕ್ಸ್‌ಪ್ಲೇನ್ ಮಾಡಬೇಕು. ಪ್ರೂಪರ್ ಅಪ್ರೊರ್ಚುನಿಟಿ ಅವನಿಗೆ ಕೊಡಬೇಕಾಗುತ್ತದೆ.

ಆ ರೀತಿ ಕೊಡದೇ ಇದ್ದರೆ ನಾಳೆ ಕೋರ್ಟ್‌ನವರು ನಮ್ಮ ಕೇಸನ್ನೇ ಒಡೆದುಹಾಕಿ ಬಿಡುತ್ತಾರೆ. ನೀವು ಮಾಡಿರತಕ್ಕಂಥ ತನಿಖೆ ಸರಿಯಿಲ್ಲವೆಂದು ಕೋರ್ಟುಗಳು ನಮ್ಮ ಕಾನೂನುಗಳು ಸರಿಯಿಲ್ಲವೆಂದು ಒಡೆದುಹಾಕತಕ್ಕಂಥದ್ದು ಈ ರೀತಿಯ ಎಷ್ಟೋ ಜಜ್‌ಮೆಂಟ್‌ಗಳನ್ನು ತಾವು ಕೂಡ ನೋಡಿದ್ದೀರಿ. ನಾವು ಕೂಡ ನೋಡಿದ್ದೇವೆ.

ಇದು ನಮಗೆಲ್ಲರಿಗೂ ಕೂಡ ಗೊತ್ತಿರತಕ್ಕಂಥ ವಿಚಾರ. ಇವೆಲ್ಲವೂ ಅನಂತರ ನಮಗೆ ಗೊತ್ತಾಗುತ್ತದೆ. ಆಗ ನಾವು 'ಬಿ' ರಿಪೋರ್ಟ್ ಹಾಕತಕ್ಕಂಥ ಅಥವಾ ಸಲ್ಲಿಸತಕ್ಕಂಥ ಒಂದು ವ್ಯವಸ್ಥೆ ನಮ್ಮ ಕಾನೂನಿನಲ್ಲಿ ಅಡಕವಾಗಿ ಕುಳಿತುಕೊಂಡಿದೆ.

11.45 ಎ.ಎಂ

ಒಂದೊಂದು ಸಾರಿ ನಮಗನ್ನಿಸುತ್ತದೆ ಅವರು ಕೊಟ್ಟಿರತಕ್ಕ ವಿವರಣೆಗಳು ಅಥವಾ ಎಕ್ಸಿಪ್ಲನೇಷನ್‌ಗಳು ಏನೇನಿವೆ ಅವು ಸರಿಯಾದವುಗಳೇ ಎನ್ನತಕ್ಕದ್ದನ್ನು ನಾವು ನೀವು ನೋಡುವಂತಿಲ್ಲ. Investigation agencies ಅದನ್ನು ನೋಡಬೇಕಾಗುತ್ತದೆ. ಆದುದರಿಂದ ಲೋಕಾಯುಕ್ತವಿರಬಹುದು ಮತ್ತೊಂದು ವಿಜಿನ್ಸಿ ಇರಬಹುದು. that is the system that we have got under our existing law. ಅದನ್ನು ಬಿಟ್ಟು ನಾವು ಹೋಗುವ ಹಾಗಿಲ್ಲ. ಅದೇ ಇರತಕ್ಕ ವಿಚಾರ. ರೈಡ್ ವಗೈರೆ ಇತ್ಯಾದಿಗಳು ಆದಮೇಲೆ ಅವರಿಗೆ ನಾವು ಪ್ರಾಪರ್ ಅಪರ್ಚುನಿಟಿಯನ್ನು ಕೊಡುತ್ತೇವೆ. ಒಬ್ಬ ವ್ಯಕ್ತಿಯ ಅಥವಾ ಅಧಿಕಾರಿಯ ಮನೆ ಆಸ್ತಿ ಇತ್ಯಾದಿ ಏನೇನಾಗಿರುತ್ತದೆ ಅದನ್ನು ಸರ್ಕಾರಕ್ಕೆ ಕೊಟ್ಟಮೇಲೆ ನಮಗೆ ಗೊತ್ತಾಗುವುದು. ಎಲ್ಲಾ ಅಧಿಕಾರಿಗಳಿಗೂ ನೀವು ಎಲ್ಲಾ ಮಾಹಿತಿಯನ್ನು ಕೊಡಿ. ಫಾರಂ ಫೈಲ್ ಮಾಡಬೇಕು ಎಂದು ಪ್ರತಿವರ್ಷವು ಮಾಡುವುದು ಇದ್ದೇ ಇದೆ. ಎಗ್ಸಿಬ್ಬಿಂಗ್ ರೂಲ್ಸ್ ಪ್ರಕಾರ ಅಥು ಆದಮೇಲೆ ಸಪೋಸ್ ಮತ್ತೆ ಕೇಸ್‌ನ್ನು ಹಾಕಿದರೆಂದು ಇಟ್ಟುಕೊಳ್ಳೋಣ. ಅಧಿಕಾರಿ ಎಲ್ಲಾ ಮಾಹಿತಿ ದಾಖಲೆಯಲ್ಲಿ ಇದೆ ಎಂದು ಹೇಳಿಬಿಟ್ಟರೆ ನಮ್ಮ ಕೇಸು ಕೋರ್ಟಿನಲ್ಲಿ ಒಂದು ನಿಮಿಷವು ಕೂಡ ನಿಲ್ಲುವುದಿಲ್ಲ.

ಇದು ಪರ ವಿರೋಧವಿರತಕ್ಕ ವಿಚಾರಗಳು. ಆಯಾಯ ಕೇಸ್‌ಗಳು ಆಯಾಯ ಮೆರಿಟ್‌ಗಳ ಮೇಲೆ ಹೋಗತಕ್ಕ ವಿಚಾರವೇ ವಿನಹ though I agre with you that in several cases ಒಂದೊಂದು ಸಾರಿ ತಪ್ಪು ಮಾಡಿರತಕ್ಕ ಒಬ್ಬ ವ್ಯಕ್ತಿ ಉಳಿದುಬಿಡಬಹುದು ಎನ್ನತಕ್ಕ ಭಾವನೆ ಇದ್ದರೂ ಕೂಡ ನಾವು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿದೆ. ಅದು ಅಲ್ಲಿರತಕ್ಕ ಕಾನೂನಿನ ವ್ಯವಸ್ಥೆ. ಇದರಲ್ಲಿ ಒಬ್ಬ ವ್ಯಕ್ತಿ ಉಳಿದರೆ ನಾವೂ ಕೂಡ ಏನು ಮಾಡುವುದಕ್ಕೆ ಬರುವುದಿಲ್ಲ. ಅನೇಕ ವರ್ಷಗಳಿಂದ ಆ ಒಂದು ವ್ಯವಸ್ಥೆ ನಮ್ಮಲ್ಲಿ ಉಳಿದುಬಿಟ್ಟಿದೆ. ಅಷ್ಟನ್ನು ಮಾತ್ರ ನಾನು ಉತ್ತರಕೊಡಬಲ್ಲನೇ ವಿನಹ ಮತ್ತೊಂದು ರೀತಿಯಲ್ಲಿ ಉಳಿದಿದ್ದ ಉತ್ತರವನ್ನು ಕೊಡಲು ಯಾರಿಗೂ ಕೂಡ ಬರುವುದಿಲ್ಲವೆಂದು ನನ್ನ ಭಾವನೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೇ, ಸಾಕಷ್ಟು cash and in terms of kind also, property seize ಮಾಡಿರುವ ಬಗ್ಗೆ ಪತ್ರಿಕೆಗಳಲ್ಲಿ ವಿವರವಾಗಿ ವರದಿಗಳು ಬರುತ್ತವೆ. ನಾವು ಅದರ ಆಧಾರದಮೇಲೆ ಅನೇಕ ಸಾರಿ ಚರ್ಚೆ ಮಾಡುತ್ತೇವೆ. ಎಷ್ಟು ಜನ ಅಧಿಕಾರಿಗಳು ಇದ್ದಾರೆಂದು ಕೇಳಿದಾಗ ೩೦ ಜನ ಅಧಿಕಾರಿಗಳ ಪಟ್ಟಿಯನ್ನು 'ಮಾಡಿದ್ದೀರಿ. I can understand in one or two cases a some small mistakes could happen. ಆದರೆ ಸಾರಾಸಗಟಾಗಿ ಮೊದಲು ಮಾಡಿದಂಥ ಎಲ್ಲಾ ಇನ್‌ವೆಸ್ಟಿಗೇಷನ್‌ಗಳನ್ನು 'ಎ' ರಿಪೋರ್ಟ್‌ನಿಂದ 'ಬಿ' ರಿಪೋರ್ಟ್ ಎಂದು ಹಾಕಿಬಿಟ್ಟು ಬದಲಾವಣೆ ಮಾಡುವುದಾದರೆ ಇಂತಹ ತನಿಖೆಯನ್ನು ಮಾಡತಕ್ಕ ಅಗತ್ಯವೇನಿದೆ. ತನಿಖೆಯಲ್ಲಿ ದೋಷವಿದೆಯೋ, ಲೋಕಾಯುಕ್ತದ ಶಾಸನದಲ್ಲಿ ದೋಷವಿದೆಯೋ, ಒಟ್ಟಾರೆ ಲೋಕಾಯುಕ್ತದ ವ್ಯವಸ್ಥೆಯಲ್ಲಿ ದೋಷವಿದೆಯೋ ಇದನ್ನು ಹುಡುಕತಕ್ಕ ಪ್ರಯತ್ನವನ್ನೇನಾದರೂ ಮಾಡಿದ್ದೀರಾ? ಹೀಗೆ ತನಿಖೆ ಮಾಡಿ,

ಲೋಕಾಯುಕ್ತದಿಂದ ಎಷ್ಟು ಜನರ ಮೇಲೆ ಇದುವರೆಗೂ 'ಎ' ರಿಪೋರ್ಟ್ ಆಗಿ, ಕೋರ್ಟಿನಲ್ಲಿ ದಾವೆ ದಾಖಲೆಯಾಗಿ ಶಿಕ್ಷೆಯಾಗಿರತಕ್ಕ ವಿವರಣೆ ಏನಾದರೂ ಇದ್ದರೆ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ತನಿಖೆಯಲ್ಲಿ ಲೋಪವಾಗಿರತಕ್ಕ ವಿಚಾರದ ಬಗ್ಗೆ ನಾನು ಹೇಳುತ್ತೇನೆ. These are all the trial end error methods. ಎನ್ನತಕ್ಕಂಥ ಭಾವನೆಯಿಂದ ಮಾತನಾಡುತ್ತಿದ್ದೇನೆ. ಮೊದಲು ನಮಗೆ ಆಂಟಿ ಕರಪ್ಷನ್ ಡಿಪಾರ್ಟ್‌ಮೆಂಟ್ ಇತ್ತು ಅದು ಉಪಯೋಗವಿಲ್ಲವೆಂದು ಬಿಟ್ಟಿವು. Vigilance Commission ಮಾಡಿದೆವು ಅದು ಉಪಯೋಗವಿಲ್ಲವೆಂದು ಹೇಳಿದರು. ಆಮೇಲೆ ಲೋಕಾಯುಕ್ತವನ್ನು ಮಾಡಿದೆವು. ಈಗ ಲೋಕಾಯುಕ್ತದ ಬಗ್ಗೆ ಕೂಡ ಅಭಿಪ್ರಾಯಗಳು, ಇದೇ ರೀತಿ ದ್ವಂದ್ವವಾಗಿ ಬರತಕ್ಕ ಸಂದರ್ಭಗಳು. ಅದಕ್ಕೆ ನಾನು ಹೇಳುತ್ತಿದ್ದೇನೆ. ನಮ್ಮ ಸಿಸ್ಟಮ್ ಏನಿದೆ, ನಾವು ಇನ್ನೂ ಕೂಡ ಟ್ರೈಯಲ್‌ನಲ್ಲಿ ಇಟ್ಟುಕೊಂಡು ಪ್ರತಿಯೊಂದನ್ನು ನೋಡಿಕೊಂಡು ಮುಂದೆ ಮುಂದೆ ಹೋಗುತ್ತಿದ್ದೇವೆ. ಈ ಲೋಕಾಯುಕ್ತ ಕಾನೂನನ್ನು ಏ ವನ್ ಎಂದು ತಮ್ಮ ಕಾಲದಲ್ಲಿಯೇ ಮಾಡಿದ್ದುದು. ನಾವು ಯಾರೂ ಕೂಡ ಅದರ ಬಗ್ಗೆ ಹೇಳಲಿಲ್ಲ. ನಾವು ಕೂಡ ಹೇಳುವಂತಿಲ್ಲ. ಆ ಕಾನೂನನ್ನು ಇನ್ನೂ ಕೆಲವು ಕಾಲವಿಟ್ಟು ನೋಡೋಣ. ಹೇಗಾಗುತ್ತದೆಂದು ಒಂದು ವೇಳೆ ಇದರಿಂದ ಉಪಯೋಗವಿಲ್ಲವೆನ್ನತಕ್ಕ ಕಾಲ ಬಂದರೆ ನಾವು ನೀವು ಎಲ್ಲರೂ ಸೇರಿ ಅದರ ಬಗ್ಗೆ ತೀರ್ಮಾನ ಮಾಡೋಣ. ಮತ್ತೊಂದು ಯಾವುದಾದರೂ ಹೊಸದಾದ ವಿಚಾರ ಒಳ್ಳೆಯದಿದೆ. ಸಮಾಜದಲ್ಲಿರತಕ್ಕ ಇಂತಹ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ, ತಪ್ಪಿತಸ್ಥರಿಗೆ ಉಗ್ರಶಿಕ್ಷೆಯನ್ನು ಕೊಡುವುದಕ್ಕೆ ಅಥವಾ ತಪ್ಪು ಆಗತಕ್ಕದನ್ನು ಕಡಿಮೆ ಮಾಡತಕ್ಕ ವಿಧಿವಿಧಾನಗಳು ನಮಗೇನಾದರೂ ಕಂಡುಬಂದರೆ ನಾವು, ಸರ್ಕಾರದವರು ಅದನ್ನು ವಿರೋಧ ಮಾಡುವುದಿಲ್ಲ. ತಮ್ಮ ಸಲಹೆಯನ್ನು ಸ್ವೀಕಾರ ಮಾಡಲು ಆ ರೀತಿಯ ಕಾರ್ಯಕ್ರಮವನ್ನು ಹಾಕಲು ವಿರೋಧ ಮಾಡುವುದಿಲ್ಲ. ಇದರಲ್ಲಿ ಎಷ್ಟು ಅಧಿಕಾರಿಗಳಿದ್ದಾರೆ ಎನ್ನುವುದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಕೊಟ್ಟಿರತಕ್ಕ ಪಟ್ಟಿ ಎದುರಿಗೆ ಇದೆ. ಜನರಲ್ ಆಗಿ ಏನಾದರೂ ಕೇಳುವುದಾದರೆ ನಾನು ವಿವರಣೆಯನ್ನು ಪಡೆದು ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ತನಿಖೆ ಆಗತಕ್ಕಂತಹ ಕಾಲದಲ್ಲಿ ಇದ್ದಂತಹ ಲೋಕಾಯುಕ್ತರು, ಅಧಿಕಾರಿಗಳು ಯಾರು ಇದ್ದರು ಮತ್ತು ಪೋಲೀಸ್ ಅಧಿಕಾರಿಗಳು ಯಾರು ಇದ್ದರು ಅವರೆಲ್ಲರೂ ಕೂಡ ಅಮಾನತ್ತಾಗಿ ಬದಲಾವಣೆ ಆಗಿದ್ದಾರೆ. ಇದು ಈ 'ಬಿ' ವರದಿ ಹಾಕುವುದಕ್ಕೆ ಕಾರಣವಲ್ಲವೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಒಂದು ತನಿಖೆ ಪ್ರಾರಂಭವಾದರೆ ಯಾವಾಗ ಮುಕ್ತಾಯವಾಗುತ್ತದೆಂದು ಗೊತ್ತಾಗುವುದಿಲ್ಲ. ಅಧಿಕಾರಿಗಳನ್ನು ನಾವಾಗಿಯೇ ಬದಲಾವಣೆ ಮಾಡುವುದಕ್ಕೆ ಹೋಗಿಲ್ಲ. ಕಮಿಷನ್ ಅವರೇ ತನಿಖೆ ಒಳ್ಳೆಯ ಹಿತದೃಷ್ಟಿಯಿಂದ ನಮಗೆ ಅಧಿಕಾರಿಗಳು ಬದಲಾವಣೆ ಆಗಬೇಕೆಂದು ಸಲಹೆ ಮಾಡಿದ್ದಾರೆ. ಅವರ ಸಲಹೆಯ ಮೇರೆಗೆ ನಾವು ಮಾಡಿಕೊಟ್ಟಿದ್ದೇವೆಯೇ ವಿನಹ ನಾವಾಗಿಯೇ ಹೋಗಿ ಈ ಸ್ಯಾಚುರಿಟಿ ಬಾಡಿಯಲ್ಲಿ ಇಂಟರ್‌ಫಿಯರ್ ಆಗತಕ್ಕಂತಹ ಪ್ರಶ್ನೆ ಇದರಲ್ಲಿ ಅಡಗಿಲ್ಲ. ಅವರ ಪ್ರಕಾರ ಒಳ್ಳೆಯ ತನಿಖೆಯ ಹಿತದೃಷ್ಟಿಯಿಂದ ನಾವು ಮಾಡಿಕೊಟ್ಟಿದ್ದೇವೆಂದು ಇಷ್ಟು ಮಾತ್ರ ನಾನು ಹೇಳಬಲ್ಲೆ.

ಶ್ರೀ ಕೆ.ಹೆಚ್. ರಂಗನಾಥ್: ಸ್ವಾಮಿ 'ಡಿ' ಪ್ರಶ್ನೆಗೆ "Whether all the legal procedures have been followed before registering the above cases against the

officers" ಎನ್ನುವುದಕ್ಕೆ "Yes" ಎಂದು ಹೇಳಿದ್ದೀರಿ. ತದನಂತರ 'ಬಿ' ರಿಪೋರ್ಟ್ ಕೊಟ್ಟಿದ್ದಾಗಿದೆ. 30 ಕೇಸ್‌ಗಳಲ್ಲೂ ಕೂಡ 'ಬಿ' ರಿಪೋಟ್ ಕೊಟ್ಟಿದ್ದಾಗಿದೆ. ಅದರ ಪಟ್ಟಿಯನ್ನು ತಾವು ಕೊಟ್ಟಿದ್ದೀರಿ. ಈಗ ಎಲ್ಲಾ ಲೀಗಲ್ ಪ್ರೊಸೀಜರ್ ಫಾಲೋ ಮಾಡಿದ್ದೇವೆ ಎಂದು ಹೇಳಿದ ಮೇಲೆ ಮತ್ತು 'ಬಿ' ರಿಪೋರ್ಟ್ ಕೊಡಬೇಕೆಂದು ಹೇಳಿ ಅದಕ್ಕೆ ಆದೇಶವನ್ನು ಯಾರು ಮಾಡಿದರು? ಮತ್ತೆ ಕೆಲವು 1987-88ರ ಸಾಲಿನ ಕೇಸುಗಳು ಇದ್ದಾವೆ. ಕೆಲವು 1989-90ರಲ್ಲಿ ಇದ್ದಾವೆ, ಪ್ರತಿವರ್ಷ ಅಧಿಕಾರಿಗಳು ಅವರ ಕಾನೂನು ಪ್ರಕಾರ ಎಷ್ಟೆಷ್ಟು ಆಸ್ತಿ ಇದೆ ಎನ್ನುವುದನ್ನು ಅವರು ಲೆಕ್ಕ ಕೊಡಬೇಕಾಗುತ್ತದೆ. ಅದನ್ನು ಕೊಟ್ಟಿರಲಿಲ್ಲವೆ? ಈ ೩೦ ಅಧಿಕಾರಿಗಳು ಆಯಾ ವರ್ಷದಲ್ಲಿ ಕೊಟ್ಟಿರಲಿಲ್ಲವೆ? ಅವರು ಕೊಟ್ಟಿದ್ದಕ್ಕೂ ಮತ್ತು ಪತ್ತೆಯಾಗಿದ್ದಕ್ಕೂ ನೋಡಿದಾಗ ಹೆಚ್ಚು ಇದೆಯೆಂದು ಫೈಮಾಫೇಸಿ ಆಗಿರಲಿಲ್ಲವೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಒಂದು ಸಾರಿ ಕ್ರಮ ತೆಗೆದುಕೊಂಡು 'ಬಿ' ರಿಪೋರ್ಟ್ ಕೊಟ್ಟಿರತಕ್ಕಂತಹ ಕೇಸ್‌ಗಳ ಸಂಖ್ಯೆ ಎಷ್ಟು ಎಂದು ಅವರು ಪ್ರಶ್ನೆ ಕೇಳಿದ್ದು ಮಾನ್ಯ ಸದಸ್ಯರು 'ಬಿ' ರಿಪೋರ್ಟ್ ಹಾಕಿಲ್ಲದೆ ಇರತಕ್ಕಂತಹ ಪ್ರಶ್ನೆ ಕೇಳಿಲ್ಲ. ತಾವು ಅದನ್ನು ನೋಡಿದರೆ ಗೊತ್ತಾಗುತ್ತದೆ. ಅಕ್ರಮ ಸಂಪತ್ತು ಹಾಗೂ ವರಮಾನಕ್ಕಿಂತ ಹೆಚ್ಚು ಆದಾಯವನ್ನು ಹೊಂದಿದ್ದರೆನ್ನಲಾದ ಕೆಲವು ಅಧಿಕಾರಿಗಳ ಮೇಲೆ ಲೋಕಾಯುಕ್ತದವರು ಮೊಕದ್ದಮೆಗಳನ್ನು ದಾಖಲು ಮಾಡಿ ತದನಂತರ ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿರುವುದು ನಿಜವೇ, ಹಾಗಿದ್ದಲ್ಲಿ ಅದಕ್ಕೆ ಕಾರಣವೇನು? ಈ ರೀತಿ ಎಷ್ಟು ಜನ ಅಧಿಕಾರಿಗಳ ಬಗ್ಗೆ ನ್ಯಾಯಾಲಯದಲ್ಲಿ 'ಬಿ' ರಿಪೋರ್ಟ್ ಲೋಕಾಯುಕ್ತದವರು ಸಲ್ಲಿಸಿದ್ದಾರೆ ಎನ್ನುವ ವಿವರಗಳನ್ನು ನೀಡುವುದು. ಎಂದು ಕೇಳಿದ್ದಾರೆ. ಆದ್ದರಿಂದ ಎಲ್ಲವೂ ಕೂಡ ಈಗ ಕೊಟ್ಟಿರತಕ್ಕಂಥ ಪಟ್ಟಿಯಲ್ಲಿದೆ. ಬೇರೆ ಕೇಸ್‌ಗಳಲ್ಲಿ ಎಲ್ಲೆಲ್ಲಿ 'ಬಿ' ರಿಪೋರ್ಟ್ ಹಾಕಿಲ್ಲ ಅಥವಾ ಕೇಸ್ ರುಜುವಾತಾಗಿದೆ ಅಥವಾ ಇವರು ಜಾಸ್ತಿ ಇನ್‌ಕಂ ಮಾಡಿದ್ದಾರೆ. ಇಲ್ಲವೇ ಕಾನೂನು ವಿರುದ್ಧವಾಗಿ ಹೋಗಿದ್ದಾರೆ. ಅವುಗಳ ಪಟ್ಟಿಯನ್ನು ಮಾನ್ಯ ಸದಸ್ಯರು ಕೇಳಿದರೆ ನಾವು ಒದಗಿಸಿಕೊಡುತ್ತೇವೆ. ಅದಕ್ಕೆ ಅಭ್ಯಂತರೇನೂ ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : 'ಡಿ'ನಲ್ಲಿ "Whether all the legal procedures have been followed before registering the above cases against the officers" ಎನ್ನುವಾಗ ಎಸ್ ಎಂದು ಹೇಳಿದ್ದೀರಿ. ಅವರ ಮನೆಯನ್ನು ರೈಡ್ ಮಾಡಿ ಆಯಿತು. ಎಲ್ಲಾ ಕಾನೂನು ಪ್ರಕಾರ ಏನು ಏನು ಕ್ರಮ ಮಾಡಬೇಕು ಅದನ್ನು ನೋಡಿ ಆಯಿತು. ತದನಂತರ ತಾವು ಹೋಗಿ ರಿಜಿಸ್ಟರ್ ಮಾಡಿ ತದನಂತರ ಅವರನ್ನು ಅಮಾನತ್ತಿನಲ್ಲಿ ಇಟ್ಟಿದ್ದೀರಿ. ತದನಂತರ ಪ್ರಶ್ನೆ ಕೇಳಿದ್ದಾರೆ. 'ಬಿ' ರಿಪೋರ್ಟ್ ಪತ್ರಿಕೆಯಲ್ಲಿ ಬಂತು. ಕೆಲವರ ಬಗ್ಗೆ ಕೋರ್ಟ್‌ನಲ್ಲಿ 'ಬಿ' ರಿಪೋರ್ಟ್ ಸಲ್ಲಿಸಿದ್ದರಂತೆ ಮತ್ತು ಅವರನ್ನೆಲ್ಲಾ ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದ್ದರಿಂದ ಪ್ರಶ್ನೆ ಕೇಳಿದ್ದಾರೆ. ಆದರೆ ಪ್ರಶ್ನೆಯಲ್ಲಿ 'ಬಿ' ಇದೆ 'ಡಿ' ಇದೆ. ನನ್ನ ಪ್ರಶ್ನೆ ಏನೆಂದರೆ ಎಲ್ಲಾ ಪ್ರೊಸೀಜರ್‌ನ್ನು ಫಾಲೋ ಮಾಡಿ ಅವರ ಕೇಸ್‌ಹಾಕಿದ ಮೇಲೆ 'ಬಿ' ರಿಪೋರ್ಟ್ ಹಾಕಬೇಕೆಂದು ಆದೇಶ ಕೊಟ್ಟವರು ಯಾರು? 'ಬಿ' ರಿಪೋರ್ಟ್ ಮಾಡಿ ಪುನರ್ ತನಿಖೆ ಮಾಡತಕ್ಕಂಥ ಪರಿಸ್ಥಿತಿ ಹೇಗೆ ಉದ್ಭವವಾಯಿತು?

ಶ್ರೀ ಎಸ್. ಬಂಗಾರಪ್ಪ : ಪ್ರೊಸೀಜರನ್ನು ಫಾಲೋ ಮಾಡಿದ ಮೇಲೆಯೇ ಒಬ್ಬ ಅಧಿಕಾರಿ ತಪ್ಪು ಮಾಡಿದ್ದಾನೆ ಅಥವಾ ಇಲ್ಲವೆಂದು ಗೊತ್ತಾಗುವುದು. ಅದಕ್ಕಾಗಿ ಪ್ರೊಸೀಜರ್ ಫಾಲೋ ಮಾಡಿದ್ದಾರೆ. ಅಲ್ಲಿ ಪ್ರಶ್ನೆ ಇರತಕ್ಕ ಪ್ರಕಾರ ಉತ್ತರ

ಕೊಟ್ಟಿರತಕ್ಕಂಥದ್ದು. ಅಲ್ಲಿ ಸಿಕ್ಕಿರತಕ್ಕಂತಹ ವಿವರಗಳ ಆಧಾರದ ಮೇಲೆ 'ಬಿ' ರಿಪೋರ್ಟ್ ಹಾಕತಕ್ಕಂಥ ಕೇಸ್ ಎಂದು ತೀರ್ಮಾನಕ್ಕೆ ಬಂದಿದ್ದಾರೆ. ಈಗ ಕೆಲವು ಕೇಸ್‌ನಲ್ಲಿ ಇದೇ ಕಾನೂನು ಪಾಲನೆ ಮಾಡಿದ ಮೇಲೆ ಬಿ ರಿಪೋರ್ಟ್ ಹಾಕತಕ್ಕಂಥದ್ದಲ್ಲ ಇದರಲ್ಲಿ ನಿಜವಾಗಲೂ ತಕ್ಷೀರ್ ಇದೆ. ಇದು ರುಜುವಾತಾಗಿದೆ. ಅಂಥವುಗಳ ಮೇಲೆ ಪಕ್ಕಾ ಕೇಸನ್ನು ಹಾಕಬೇಕು ಎಂಬ ತೀರ್ಮಾನ ಇನ್ನು ಕೆಲವು ಕೇಸ್‌ಗಳಲ್ಲಿ ಆಗಿವೆ. ಆದರೆ ನಾವು ಪಾಲನೆ ಮಾಡತಕ್ಕಂತಹ ಪ್ರೊಸೀಜರ್ ಏನು ಇದೆ, ಅದನ್ನು ಮಾಡಲೇಬೇಕಾಗುತ್ತದೆ. ಅದರ net result is 'ಬಿ' ರಿಪೋರ್ಟ್ file ಮಾಡತಕ್ಕಂಥದ್ದು ಎಂಬ ಅಭಿಪ್ರಾಯ ಇದೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನನ್ನ ಗೆಳೆಯರಾದಂಥ ಮಾನ್ಯ ರಂಗನಾಥ್‌ರವರು ಏನು ಕೇಳಿದರೋ ಅದನ್ನು ಅಲ್ಲಿಗೇ ಬಿಟ್ಟರು. ನಾನು ಅದನ್ನೇ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆ. ಮೊದಲನೆಯದಾಗಿ ಲೋಕಾಯುಕ್ತದವರು ತಾವೇ ತನಿಖೆ ಮಾಡಿ ಮಾಕದ್ದಮೆಯನ್ನು ನೋಂದಾಯಿಸಿಕೊಂಡಿದ್ದಾರೆ. ಮೊಕದ್ದಮೆಯನ್ನು ನೋಂದಾಯಿಸಿ ಕೊಳ್ಳಬೇಕಾದರೆ ಅವರು ಕೆಲವು ಮುಖ್ಯವಾದ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅನಂತರ ಪ್ರೈಮಾಫೇಸಿ ಕೇಸು ಏನಿದೆ ಅದನ್ನು ನೋಡುತ್ತಾರೆ. ಒಂದುಸಾರಿ ಪ್ರೈಮಾಫೇಸಿ ಕೇಸು ಇದೆ ಅಂದಮೇಲೆ ಅವರು ಎಫ್.ಐ.ಆರ್.ನ್ನು ರಿಜಿಸ್ಟರ್ ಮಾಡಿಸುತ್ತಾರೆ. ಇದಕ್ಕೆ ನಾನೇನೂ ಹೋಗಿ ಅರ್ಜಿಯನ್ನು ಕೊಟ್ಟಿಲ್ಲ. ಬೇರೆಯವರೇನೂ ಹೋಗಿ ಅರ್ಜಿಯನ್ನು ಕೊಟ್ಟಿದ್ದಲ್ಲ. ಹಾಗೆ ಮಾಡಿದಮೇಲೆ ತದನಂತರ ಬಿ ರಿಪೋರ್ಟ್ ಕೊಡತಕ್ಕ ಪ್ರಶ್ನೆ ಬರುವುದಿಲ್ಲ. ಇಲ್ಲಿ ಎರಡು ಇನ್‌ಕನ್ಸಿಸ್ಟೆಂಟ್ ಉತ್ತರಗಳಿವೆ. ಕನ್ನಡದಲ್ಲಿ (ಡಿ) ಮತ್ತು (ಉ) ಎಂದು ಏನಿದೆ ಇದಕ್ಕೆ ಮೊದಲನೆಯದಾಗಿ ಹೇಳುತ್ತಿದ್ದಾರೆ. ನಾವು ಕಾನೂನು ಪ್ರಕಾರ ಇದನ್ನೆಲ್ಲಾ ತನಿಖೆಮಾಡಿ ಪ್ರೈಮಾಫೇಸಿ ಇದ್ದುದರಿಂದ ಅವರು ಕೇಸನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಹಾಗೆ ಹೇಳಿದಮೇಲೆ (ಉ)ನಲ್ಲಿ ಮೊಕದ್ದಮೆಗಳನ್ನು ಸರಿಯಾಗಿ ದಾಖಲಿಸದ ಲೋಕಾಯುಕ್ತ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ? ಎಂಬುದಕ್ಕೆ 'ಇಲ್ಲ' ಎಂದು ಉತ್ತರ ಹೇಳಿದ್ದಾರೆ. ಹಾಗಾದರೆ ಸ್ವಾಮಿ ಇದರ ಅರ್ಥ ಏನು? ಒಂದು ಪಕ್ಷ ಮೊದಲನೆಯದು ಸರಿಯಾಗಿದ್ದರೆ, ಎರಡನೆಯದು ಸರಿಯಾಗಿರುವುದಕ್ಕೆ ಸಾಧ್ಯವಿಲ್ಲ. ಒಂದು ಪಕ್ಷ ಎರಡನೆಯದು ಸರಿಯಾಗಿದ್ದರೆ ಮೊದಲನೆಯದು ಸರಿಯಾಗಿರುವುದಕ್ಕೆ ಸಾಧ್ಯವಿಲ್ಲ. ಹಾಗಾದರೆ ಯಾರು ಈ ಎಫ್.ಐ.ಆರ್.ನ್ನು ರಿಜಿಸ್ಟರ ಮಾಡಿಕೊಂಡರು ಅವರುದ್ದು ಪ್ರೈಮಾಫೇಸಿ ತಪ್ಪು ಇರಬಹುದು. ಇಲ್ಲದಿದ್ದರೆ ಯಾರು 'ಬಿ' ರಿಪೋರ್ಟ್ ಕೊಟ್ಟರು ಅವರದ್ದು ಪ್ರೈಮಾಫೀಸಿ ತಪ್ಪು ಇರಬೇಕು. ಆದರೆ ಇಲ್ಲಿ ಸರ್ಕಾರದವರು ಎರಡಕ್ಕೂ ಒಳ್ಳೆಯವರಾಗಿದ್ದಾರೆ. ಮೊದಲನೆಯವರು ಮಾಡಿದ್ದು ಸರಿ ಎಂದು ಹೇಳುತ್ತಾರೆ. ಅನಂತರ 'ಬಿ' ರಿಪೋರ್ಟ್ ಕೊಟ್ಟಿದ್ದು ಸರಿ ಎಂದು ಹೇಳುತ್ತಾರೆ. ಇದು ಹೇಗೆ ಸಾಧ್ಯ ಸ್ವಾಮಿ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಒಂದು ವಿಚಾರವನ್ನು ಹೇಳುವುದನ್ನು ಮರೆತೆ. ಪ್ರತಿವರ್ಷ ಅಧಿಕಾರಿಗಳು ಫಾರಂನ್ನು ಏನು ಫಿಲಪ್ ಮಾಡಿಕೊಡಬೇಕೋ.....

ಶ್ರೀ ಹೆಚ್. ಏಕಾಂತಯ್ಯ : ನನ್ನ ಪ್ರಶ್ನೆ ಏನೆಂದರೆ ಒಂದುಸಾರಿ ಪ್ರೈಮಾಫೇಸಿ ಕೆಸ್ ಇದೆ ಎಂದು ರಿಜಿಸ್ಟರ್ ಮಾಡಿಕೊಂಡಮೇಲೆ ನೀವು "ಬಿ" ರಿಪೋರ್ಟನ್ನು ಕೊಡತಕ್ಕ ಅವಶ್ಯಕತೆಯೇ ಇಲ್ಲ ಒಂದುಪಕ್ಷ "ಬಿ" ರಿಪೋರ್ಟ್‌ನ್ನು ಕೊಟ್ಟಿದ್ದರೆ ಪ್ರೈ

ಮಾಫೇಸಿ ಕೇಸ್ ಇದೆ ಎಂದು ಯಾರು ರಿಜಿಸ್ಟರ್ ಮಾಡಿಕೊಂಡಿದ್ದಾರೆ ಅವರದ್ದು ದುರದ್ದೇಶ ಇರಬೇಕು.

ಯಾರು ಎಫ್.ಐ.ಆರ್.ನ್ನು ರಿಜಿಸ್ಟರ್ ಮಾಡಿಕೊಂಡರು ಅವರದ್ದು ದುರುದ್ದೇಶ ಇರಬೇಕು ಇಲ್ಲದಿದ್ದರೆ ಯಾರು ಇವರಿಗೆ ಸಹಾಯ ಮಾಡುವುದಕ್ಕೆ "ಬಿ" ರಿಪೋರ್ಟನ್ನು ಮಾಡಿದ್ದಾರೆ ಅವರದ್ದು ದುರುದ್ದೇಶ ಇರಬೇಕು. ಆದುದರಿಂದ ಇದರ ಬಗ್ಗೆ ತನಿಖೆ ಆಗಬೇಕಾದ ಅವಶ್ಯಕತೆ ಇದೆ. ಇಲ್ಲಿ ಮೊದಲನೆಯವರು ಮಾಡಿದ್ದು ಸರಿ ಎಂದು ಹೇಳುತ್ತಾರೆ ತದನಂತರ "ಬಿ" ರಿಪೋರ್ಟ್ ಕೊಟ್ಟಿದ್ದು ಸರಿ ಎಂದು ಸರ್ಕಾರದವರು ಹೇಳುವುದಾದರೆ ಇದಕ್ಕೆ ಏನು ಅರ್ಥ ಇದೆ? ಇಲ್ಲಿ ಇಪ್ಪರನ್ನೂ ಸಂರಕ್ಷಣೆ ಮಾಡುವುದಕ್ಕೆ ಈ ಮಾತನ್ನು ಹೇಳಿದ್ದೀರಾ?

ಇನ್ನೊಂದು ವಿಚಾರ ಎಂದರೆ ಡೇಟ್ ಆಫ್ ರಿಜಿಸ್ಟ್ರೇಷನ್ ಆಫ್.ಎಫ್.ಐ.ಆರ್. ಎಂದು ಏನು ಹೇಳುತ್ತಾರೆ ಮತ್ತು "ಬಿ" ರಿಪೋರ್ಟನ್ನು ಏನು ಕೊಟ್ಟಿದ್ದಾರೆ ಅದನ್ನು ಯಾರು ಮಾಡಿದ್ದಾರೆ ಅದನ್ನೂ ಲೋಕಾಯುಕ್ತದವರೇ ಮಾಡಿರಬೇಕಲ್ಲವೆ? ಇದನ್ನು ಬೇರೆ ಅಧಿಕಾರಿಗಳು ಮಾಡಿದ್ದಾರೆ ಅಥವಾ What is the intention? ಒಬ್ಬನೇ ಅಧಿಕಾರಿ ಒಂದೇ ಹುದ್ದೆಯಲ್ಲಿರತಕ್ಕ ಅಧಿಕಾರಿ ಎರಡು ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ ಅಧಿಕಾರಿಗಳು ಬದಲಾವಣೆ ಆದಮೇಲೆ ತೀರ್ಮಾನ ಬದಲಾವಣೆ ಆಗುವುದಕ್ಕೆ ಸಾಧ್ಯವಿಲ್ಲ ಅಂಕಿಅಂಶಗಳಮೇಲೆ, ಮಾಹಿತಿಯ ಆಧಾರದಮೇಲೆ, ಕಾನೂನಿನಮೇಲೆ ತೀರ್ಮಾನ ಆಗಬೇಕೇ ಹೊರತು ಕೇವಲ ವ್ಯಕ್ತಿಗಳ ಬದಲಾವಣೆಯಿಂದ ಇದು ತೀರ್ಮಾನವಾಗುವುದಕ್ಕೆ ಸಾಧ್ಯವಿಲ್ಲ. ಆದರೆ ಇಲ್ಲಿ ನಾನು ಹೇಳುತ್ತೇನೆ ಅವರು ಏನು ಎಫ್.ಐ.ಆರ್.ನ್ನು ಹಾಕಿದ್ದಾರೆ ಏನು ತೀರ್ಮಾನ ಮಾಡಿದ್ದಾರೆ ಏನು 'ಬಿ' ರಿಪೋರ್ಟನ್ನು ಹಾಕಿದ್ದಾರೆ ಅದು ಲೋಕಾಯುಕ್ತ ಒಂದೇ ಅಲ್ಲವೆ? ಆದುದರಿಂದ ನಾನು ಸರ್ಕಾರದಿಂದ ಈ ಬಗ್ಗೆ ಉತ್ತರವನ್ನು ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮೊದಲು ತಮ್ಮ ಪ್ರಶ್ನೆಗೆ ಉತ್ತರ ಕೊಟ್ಟು ನಂತರ ಮಾನ್ಯ ಸದಸ್ಯರು ಪ್ರಶ್ನೆಗೆ ಉತ್ತರ ಕೊಡಬಯಸುತ್ತೇನೆ ತಾವು ಹೇಳಿರತಕ್ಕ ಫೈಮಾಫೇಸಿ ಕೇಸು ಒಂದು ಛಾರ್ಜ್ ಷೀಟ್ ಹಾಕತಕ್ಕದ್ದು ಒಂದು. ಕೇಸು ರಿಜಿಸ್ಟರ್ ಎಂದರೆ 'ಬಿ' ರಿಪೋರ್ಟನ್ನು ಮಾಡತಕ್ಕದ್ದು ಒಂದು. ಕೇಸನ್ನು ರಿಜಿಸ್ಟರ್ ಮಾಡತಕ್ಕದ್ದು ಎಂದರೆ the moment complaint is lodged, under law a case has to be registered.

SRI D.B. CHANDRE GOWDA : By whom?

ಶ್ರೀ ಎಸ್. ಬಂಗಾರಪ್ಪ : ಇಲ್ಲಿ ಕಂಪ್ಲೇಂಟ್ ಬಂದಾಗ ಇಲ್ಲಿರತಕ್ಕ ಕಾನೂನು ಪ್ರಕಾರ ಯಾರಿಗೆ ಅಧಿಕಾರ ಇದೆ ಅವರು ಕೇಸನ್ನು ರಿಜಿಸ್ಟರ್ ಮಾಡಿಕೊಳ್ಳುತ್ತಾರೆಂದು ನಾವು ಇಟ್ಟುಕೊಳ್ಳೋಣ ಇದೇರೀತಿ ಪೋಲೀಸ್ ಸ್ಟೇಷನ್ ವಗೈರೆ ಆಗುತ್ತದೆಂದು ನಾನು ಜನರಲ್ ಆಗಿ ಹೇಳುತ್ತಿದ್ದೇನೆ. ಆದರೆ ಈಗ ಇಲ್ಲಿರತಕ್ಕದ್ದು ಫೈಮಾಫೇಸಿ ಕೇಸು ಯಾವಾಗ ಬರುತ್ತದೆಂದರೆ only when the chargesheet is filed.

ಛಾರ್ಜ್ ಷೀಟ್ ಎಂದರೇನು? It is not a proof. Filing a chargesheet is not at all a proof. On the basis of the evidence available on record ಆವಾಗ Court or ಲೋಕಾಯುಕ್ತ ಅಥವಾ ಬೇರೆಯವರು ತಪ್ಪಿಸ್ಥರು ಎಂದು ತಿಳಿದುಬಂದಾಗ ಜಡ್ಜ್‌ಮೆಂಟ್ ಪಾಸ್ ಮಾಡುತ್ತಾರೆ. That may end up in awarding of conviction.

ಅನಂತರ ಕನ್ವಿಕ್ಷನ್ ಆಗುತ್ತದೆ. ಅದು ಈಗ ಪ್ರೋಸಿಷನ್‌ನಲ್ಲಿರತಕ್ಕದ್ದು ನಾವು ಇರತಕ್ಕಂಥ ಸ್ಟೇಜ್ ಯಾವುದೆಂದರೆ ನಮಗೆ ಏನಾದರೂ ಅನುಮಾನ ಕಂಡುಬಂದಾಗ ರೈಡ್ ಮಾಡಿದಂಥ ವಿಚಾರಗಳನ್ನು ನಮಗಿರತಕ್ಕ ಅಧಿಕಾರದ ಪ್ರಕಾರ ಮಾಡುತ್ತೇನೆ ನಾವು ಕೇಸ್ file ಮಾಡಿದ ಮೇಲೆ ಕೂಡ ಮತ್ತು investigation ತೆಗೆದುಕೊಂಡ ಮೇಲೆ 'B' report ಯಾವಾಗ ಹಾಕುತ್ತಿವೆಂದರೆ primafacie ಕೂಡ ಇಲ್ಲವೆಂದು

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷರೇ ಇದರಲ್ಲಿ ಒಂದು ಅಂಶ ತಾವು ಮುಖ್ಯವಾಗಿ ಪರಿಗಣಿಸಬೇಕಾಗಿದೆ ಅದೇನೆಂದರೆ it is not on the basis of the complaint by the third party. This is on the basis of the ride and investigation conducted by the Lok Ayukta under the LokAyukta Act.

MR. SPEAKER : General proposition of law

SRI H. EKANTHAIAH : That is not applicable here.

SRI S. BANGARAPPA : I am just distinguishing.

ಶ್ರೀ ಹೆಚ್. ಏಕಾಂತಯ್ಯ : ನಿನ್ನೆಮೊನ್ನೆ ಸಹ ಕೋರ್ಟಿಗೆ ಹೋಗಿದ್ದೆ ಸನ್ಮಾನ್ಯ ಅಧ್ಯಕ್ಷರೇ ಇಲ್ಲಿ ಪ್ರಶ್ನೆ ಏನೆಂದರೆ ಯಾರೂ ದೂರನ್ನು ಕೊಟ್ಟಿಲ್ಲ ಲೋಕಾಯುಕ್ತದವರು ತಾವಾಗಿಯೇ ರೈಡ್‌ಮಾಡಿ ತಮಗೆ ದೊರೆತ ಸುಳುವಿನ ಆಧಾರದಮೇಲೆ ಈ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಆ ರೀತಿ ತೀರ್ಮಾನಕ್ಕೆ ಬರುವಂಥ ಅಧಿಕಾರ ಅವರಿಗೆ ಇದೆ ಆ ಅಧಿಕಾರ ಬಂದಮೇಲೆ ಅವರಿಗೆ ಎಫ್.ಐ.ಆರ್. ಹಾಕಿದ್ದಾರೆ ಎಫ್.ಐ.ಆರ್. ಹಾಕಿದಮೇಲೆ there shall be some prima facie case as per the Lok Ayukta themselves. It is a separate investigating agency all together. ಅದರಂತೆ ಬಿ. ರಿಪೋರ್ಟ್ ಕೊಡುವವರು ಅವರೇ ಯಾರು ಎಫ್.ಐ.ಆರ್. ಹಾಕಿದ್ದಾರೆ ಯಾರು ರಿಜಿಸ್ಟರ್‌ಮಾಡಿಕೊಂಡು ದೂರು ಕೊಟ್ಟಿದ್ದಾರೆ ಅವರೇ ಈ 'ಬಿ' ರಿಪೋರ್ಟ್ ಕೊಟ್ಟಿರುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಅದಕ್ಕೆ ಕೇಳಿದ್ದುದು

ಶ್ರೀ ಹೆಚ್. ಏಕಾಂತಯ್ಯ : ನನ್ನ ಪ್ರಶ್ನೆ ಇಷ್ಟೇ ನನಗೆ ನೇರವಾಗಿ ಉತ್ತರ ಬೇಕಾಗಿದೆ.

ಅಧ್ಯಕ್ಷರು : ನೇರವಾಗಿ ಉತ್ತರ ಹೇಳಿದ್ದಾರಲ್ಲ

ಶ್ರೀ ಹೆಚ್. ಏಕಾಂತಯ್ಯ : ಇಲ್ಲ ಬಂದಿಲ್ಲ ನೇರವಾದ ಉತ್ತರಬಂದಿಲ್ಲ

ಶ್ರೀ ಎಸ್. ಬಂಗಾರಪ್ಪ : ಮಾನ್ಯ ದೇಶಪಾಂಡೆಯವರೇ ನಾನು ಜನರಲ್ ಆಗಿ ಹೇಳಿದೆ. ನಮಗಿರತಕ್ಕಂಥ ಲೀಗಲ್ ಸಿಸ್ಟಮ್ ಏನಿದೆ.....

(ಗೊಂದಲ)

Sri H. Ekanthaiah : Under the Lok Ayukta there are so many ways to conduct an investigation. ಅಧ್ಯಕ್ಷರು : ಅದಕ್ಕೆ ಉತ್ತರ ಹೇಳುತ್ತಾರೆ ಕೇಳಿ

ಶ್ರೀ ಎಸ್. ಬಂಗಾರಪ್ಪ : ನಮಗಿರತಕ್ಕಂಥ ಜನರಲ್ ಕಾನೂನನ್ನು ನಿಮ್ಮ ಹತ್ತಿರ ಇಡುತ್ತೇನೆ. ಇಲ್ಲಿರತಕ್ಕಂಥ ಲೋಕಾಯುಕ್ತ ಕಾನೂನು ಪ್ರಕಾರ ನಾನು ಒಂದು ಉದಾಹರಣೆಯನ್ನು ಕೊಟ್ಟೆ ಲೋಕಾಯುಕ್ತದವರು ತಾವೇ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಕೇಸ್ ರಿಜಿಸ್ಟರ್ ಮಾಡುವುದಕ್ಕೆ ರೈಡ್ ಮಾಡುವುದಕ್ಕೆ ನಾವು ಎಲ್ಲಾ ಪವರ್ಸ್‌ನ್ನು ಕೊಟ್ಟಿರತಕ್ಕಂಥ ವಿಚಾರ ಅಲ್ಲಿ ಇದ್ದೇಇದೆ. ಅದನ್ನು ಡಿಫರೆನ್‌ಶಿಯೇಟ್ ಮಾಡುವುದಕ್ಕೆ ನಾನು ಹೇಳಿದ್ದುದು ಇಲ್ಲಿರತಕ್ಕಂಥದ್ದು ನಮಗೆ ಅಂದರೆ ಈ ಲೋಕಾಯುಕ್ತಕ್ಕೆ

ರಿಪೋರ್ಟ್ ಬಂದಕೂಡಲೇ ಅವರು ಹೋಗಿ ರೈಡ್ ಮಾಡಿದ್ದಾರೆ. ರೈಡ್ ಮಾಡುವುದಕ್ಕೆ ಕಾರಣವೇನೆಂದರೆ ಅವರು ಸಬ್ಮಿಟ್ ಮಾಡಿರತಕ್ಕಂಥ ರಿಟರ್ನ್ಸ್ ಇರಬಹುದು ಅಥವಾ ಅವರಿಗೆ ಬಂದಿರತಕ್ಕಂಥ ಇನ್ಫರ್ಮೇಷನ್ ಮೇಲೆ ಇರಬಹುದು. ಬೇರೆ ರಿಟರ್ನ್ಸ್ ಮಾಡಿರತಕ್ಕಂಥದ್ದು ಪ್ರಶ್ನೆ ಒಂದೇ ಅಲ್ಲ, they have got a scope.

ಬಹಳ ವೈಡನ್ ಆಗಿದೆ ತಮಗೆ ಗೊತ್ತಿರುವ ಪ್ರಕಾರ ಅದನ್ನು ನೋಡಿ ಅದರಮೇಲೆ ಅವರು ರೈಡ್ ಮಾಡಿರುತ್ತಾರೆ ಅದು ಯಾವಾಗ ಅಂದರೆ ಬಂದಿರತಕ್ಕಂಥ ಇನ್ಫರ್ಮೇಷನ್ ಮೇಲೆ ಇನ್ವೆಸ್ಟಿಗೇಷನ್ ತೆಗೆದುಕೊಳ್ಳುತ್ತಾರೆ. During the course of the investigation if Lok Ayukta, Through their investigating agency, come to the conclusion that a case is made out prima facie case is made out, then Lok Ayukta is bound to submit the 'B' Report.

ಶ್ರೀ ಬಿ.ಎಸ್ ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಲೋಕಾಯುಕ್ತ ರೈಡ್‌ಮಾಡಿ 40-50 ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಬಂಗಾರ ಮತ್ತು ಹಣ ಬ್ಯಾಂಕ್‌ನಲ್ಲಿ ಡಿಪಾಸಿಟ್ ಇದ್ದದನ್ನು ಸೀಸ್ ಮಾಡಿದ್ದರಿಂದ ಅವರನ್ನು ತಕ್ಷಣವೇ ಸಸ್‌ಪೆಂಡ್‌ನಲ್ಲಿ ಇಡಬೇಕೆಂದು ಆದೇಶ ಕೊಟ್ಟಮೇಲೂ ಸಹ ಸರ್ಕಾರ ಉನ್ನತ ಅಧಿಕಾರಿಗಳ ಜೊತೆಗೆ ಶಾಮೀಲಾಗಿ ರಕ್ಷಣೆಯನ್ನು ಕೊಟ್ಟರೆ ಆ ಲೋಕಾಯುಕ್ತಕ್ಕೆ ಇರತಕ್ಕಂಥ ಬೆಲೆ ಹಾಳಾಗಿಹೋಗುತ್ತದೆ. ಆದ್ದರಿಂದ ನನ್ನ ಪ್ರಾರ್ಥನೆ ಏನೆಂದರೆ ಲೋಕಾಯುಕ್ತವನ್ನು ರದ್ದುಮಾಡಿ ಆ ಅಧಿಕಾರಿಯ 50 ಕೋಟಿ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿರತಕ್ಕಂಥದ್ದು ಮತ್ತು ಬಂಗಾರ ಏನಿದೆ ಅದನ್ನು ಸೀಸ್ ಮಾಡಿದಮೇಲೂ ಸಹ ಅಂಥ ಅಧಿಕಾರಿ ರಕ್ಷಣೆ ಕೊಟ್ಟು ಲೋಕಾಯುಕ್ತ ಬಿ ರಿಪೋರ್ಟ್ ಕೊಡಿಸುವಂಥ ಪ್ರಯತ್ನ ಮಾಡಿದಮೇಲೆ ಇದು ಲೋಕಾಯುಕ್ತಕ್ಕೆ ಅವಮಾನ ಮಾಡಿದಂತಾಗುತ್ತದೆ. ಸರ್ಕಾರಕ್ಕೆ ಈ ರೀತಿ ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡಬೇಕೆನ್ನುವ ಅಪೇಕ್ಷೆ ಇದ್ದರೆ ದಯವಿಟ್ಟು ಲೋಕಾಯುಕ್ತವನ್ನು ರದ್ದುಮಾಡಿ ಇಲ್ಲದಿದ್ದರೆ ಜನತೆ ಈ ವ್ಯವಸ್ಥೆಯ ಬಗ್ಗೆ ನಂಬಿಕೆಯನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ನಿಮಗೆ ನೇರವಾಗಿ ದಾಖಲೆ ಕೊಡುತ್ತೇನೆ. 'ಬಿ'ರಿಪೋರ್ಟ್ ಹಾಕಿದ್ದಾರೆ ಮತ್ತು ಅಷ್ಟು ಬಂಗಾರವನ್ನು ಸೀಸ್ ಮಾಡಿದ್ದಾರೆ. ಅದಾದಮೇಲೆ ತಕ್ಷಣ ಅವರನ್ನು ಸಸ್‌ಪೆಂಡ್‌ನಲ್ಲಿ ಇಡಿ ಎಂದು ಹೇಳತಕ್ಕಂಥ ಉನ್ನತ ಅಧಿಕಾರಿಯನ್ನೂ ಕೂಡ 'ಬಿ' ರಿಪೋರ್ಟಿನಲ್ಲಿ ಕೊಟ್ಟಿರತಕ್ಕಂಥ ಉದಾಹರಣೆ ಇದೆ. ಫೈಲ್ ಬೇಕಾದರೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಸರ್ಕಾರ ನೇರವಾಗಿ ಪ್ರವೇಶ ಮಾಡಿದೆ.

ಈ ರೀತಿ 'ಬಿ' ರಿಪೋರ್ಟ್ ಕೊಡುವುದಕ್ಕೆ ಸಾಧ್ಯ ಇದೆಯೇ? ನಿಮಗೆ ದಾಖಲೆಯನ್ನು ಕಳುಹಿಸಿಕೊಡುತ್ತೇನೆ ತಾವು ನೋಡಿ ಉತ್ತರವನ್ನು ಕೊಡಿ. ಸ್ಪೆಸಿಫಿಕ್ ಆಗಿ 1-2-3 ಕೇಸ್‌ಗಳನ್ನು ಕೂಡ ಕಳುಹಿಸಿಕೊಡುತ್ತೇನೆ. ಲೋಕಾಯುಕ್ತ ತನಿಖೆಮಾಡಿ, ಎಲ್ಲಾ ದಾಖಲೆಗಳನ್ನು ಕೊಟ್ಟು ಅವರಲ್ಲಿ ಎಷ್ಟು ಆಸ್ತಿ ಇರಬೇಕೆನ್ನುವುದಕ್ಕೆ 100 ಪಟ್ಟು ಆಸ್ತಿ ಇರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಅದಕ್ಕೋಸ್ಕರವಾಗಿ ಅವರನ್ನು ಸಸ್‌ಪೆಂಡ್‌ನಲ್ಲಿ ಇಡಿ ಎಂದು ಹೇಳಿದಮೇಲೆ, ಆ ಸಂದರ್ಭದಲ್ಲಿ ಸರ್ಕಾರ ಪ್ರವೇಶಮಾಡಿ 'ಬಿ' ರಿಪೋರ್ಟ್ ಕೊಟ್ಟಿರತಕ್ಕಂಥ ಉದಾಹರಣೆ ಇದೆ. ಲೋಕಾಯುಕ್ತವನ್ನು ಕಳುಹಿಸಿಕೊಟ್ಟು ಸರ್ಕಾರವೇ 'ಬಿ' ರಿಪೋರ್ಟ್‌ನ್ನು ಕೊಡಿ ಎಂದು ಪ್ರೋತ್ಸಾಹ ಕೊಡುವಂಥ ಮಟ್ಟಕ್ಕೆ ಬಂದರೆ ಈ ವ್ಯವಸ್ಥೆ ಹಾಳಾಗಿ ಹೋಗುತ್ತದೆಂದು ನಾನು ನೇರವಾಗಿ ಹೇಳುವ ಪ್ರಶ್ನೆ. ಇದಿಲ್ಲವೆಂದರೆ ದಯವಿಟ್ಟು ಸ್ಪಷ್ಟೀಕರಣ ಕೊಡಿ.

ಶ್ರೀ ಎಸ್. ಬಂಗಾರಪ್ಪ : ವಿವರಗಳನ್ನು ನೋಡದೆ ಹೇಳುವುದಕ್ಕಾಗುವುದಿಲ್ಲ, ದಯವಿಟ್ಟು ವಿವರಗಳನ್ನು ಕಳುಹಿಸಿಕೊಡಿ. ಅದು ಏನೆಂದು ನೋಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ: ಸರ್ಕಾರ ಅನುಸರಿಸುವಂಥ ನೀತಿ ಏನಿದೆ..

ಅಧ್ಯಕ್ಷರು: ಪ್ರಶ್ನೋತ್ತರ ಸಮಯದಲ್ಲಿ ಸರ್ಕಾರದ ನೀತಿ ಪ್ರಶ್ನೆಯನ್ನು ಎತ್ತುವುದು ಸರಿಯಲ್ಲ.

ಶ್ರೀ ಹೆಚ್. ಏಕಾಂತಯ್ಯ : ಅದು ಸರ್ಕಾರದ ಉತ್ತರದಿಂದ ಉದ್ಭವಿಸಿದೆ.ನಾವು ಮಾಡುವುದು ಸರಿ, ನೀವು ಮಾಡುವುದು ಸರಿ ಎಂದರೆ, ಉತ್ತರ ಪ್ರಶ್ನೆ ಒಂದೇ ಅಂದಹಾಗೆ ಆಯಿತಲ್ಲವೆ?

ಶ್ರೀ ಎಸ್. ಬಂಗಾರಪ್ಪ ; ಯಾವುದು ಸರಿ ಎಂಬ ಪ್ರಶ್ನೆ ಅಲ್ಲ. ವಾಸ್ತವಾಂಶ ಏನೆಂದರೆ ಲೋಕಾಯುಕ್ತದ ವರದಿ ಏನಿದೆ ಅದನ್ನು ತಮ್ಮ ಮುಂದಿಟ್ಟಿದ್ದೇವೆ. ಅದು ಸ್ಟ್ಯಾಟ್ಯುಟರಿ ಬಾಡಿ.

ಶ್ರೀ ವಾಟಾಳ್ ನಾಗರಾಜ್ : ಅಧಿಕಾರಿಗಳ ಮೇಲೆ ಲೋಕಾಯುಕ್ತ ಮೊಕದ್ದಮೆ ಹೂಡಿದೆ.

Mr. Speaker: You will have to make out a case, precisely and then,

ಜಾಸ್ತಿ ಟೈಂ ತೆಗೆದುಕೊಳ್ಳಬಾರದು. ಅವರಿಂದ ಉತ್ತರ ಬರುವುದಕ್ಕೆ ಮೊದಲೇ ನೀವಿಬ್ಬರು ಹೀಗೆ ಚರ್ಚೆ ಮಾಡುತ್ತಿದ್ದರೆ ಹೇಗೆ? And then you being a seasoned parliamentarian, it could not be argumentative.

ಶ್ರೀ ಹೆಚ್. ಏಕಾಂತಯ್ಯ : ನಾನು ವಾದ ಮಾಡುತ್ತಿಲ್ಲ. ಎರಡೂ ಒಂದೇ ಅಧಿಕಾರ, ಒಂದೇ ಪ್ರಾಧಿಕಾರ, ಅವರು, ನೀವು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಯಾವ ಆಧಾರದ ಮೇಲೆ ಎಫ್.ಐ.ಆರ್. ಮಾಡಿದ್ದಾರೆ ಅದೇ ಆಧಾರದ ಮೇಲೆ 'ಬಿ' ರಿಪೋರ್ಟ್ ಕೊಡುವುದಕ್ಕೆ ಸಾಧ್ಯವಿಲ್ಲ. ಒಂದೇ ಮಾಹಿತಿ ಬಿ. ರಿಪೋರ್ಟ್ ಮತ್ತು ಎಫ್. ಐ.ಆರ್. ಮಾಡುವುದಕ್ಕೆ ಆಧಾರವಾಗಲು ಸಾಧ್ಯವಿಲ್ಲ. ಇಲ್ಲಿ ನೀವು ಹೌದು, ಇಲ್ಲವೆಂದು ಏನು ಹೇಳಿದ್ದೀರಿ ಅದು ಸರಿಯಲ್ಲ. ಇದರಲ್ಲಿ ಯಾರಾದರೂ ತಪ್ಪು ಮಾಡಿರಲೇಬೇಕು. ತಪ್ಪು ಮಾಡುವುದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಏಕಾಂತಯ್ಯನವರ ಅಭಿಪ್ರಾಯವನ್ನು ಅರ್ಥ ಮಾಡಿಕೊಂಡಿದ್ದೇನೆ. ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. There is an I.G.P. attached to the Lok Ayukta also.

ಲೋಕಾಯುಕ್ತ ಆಕ್ಟ್ ಪ್ರಕಾರ ಏನು ಕಾರ್ಯಕ್ರಮ ಹಾಕಬೇಕೋ ಅದನ್ನು ಹಾಕುತ್ತದೆ Prevention of ಕರಪ್ಷನ್ ಆಕ್ಟ್ ಬೇರೆ ಇದೆ. IGP Lok Ayukta- that is police wing of Lok Ayukta. It is declared a Police Station under the Act.

ಅದು ತಮಗೆ ಗೊತ್ತಿದೆ. ಆ ವಿಷಯಕ್ಕೆ ಏತಕ್ಕೆ ಹೋಗಬೇಕೆಂದು ಜನರಲ್ ಆಗಿ ಹೇಳಿದೆ. ಇವೆಲ್ಲ ಪ್ರಶ್ನೆ ಇರುವುದರಿಂದ Suo moto even the IGP attached to the Lok Ayukta can get a case registered, it can be investigated and go-ahead with the investigation. ಅಮೇಲೆ ಏನಾಗುತ್ತದೆ ಅವರ ಗಮನಕ್ಕೆ ಬಂದಾಗ? ಬಿ. ರಿಪೋರ್ಟ್ ಹಾಕಬೇಕೆಂದು ಬಂದರೆ he can file a 'B' Report even under the P.C. Act itself. ತಮಗೆ ಗೊತ್ತಿರುವ ಹಾಗೆ IGP wing attached to the Lok Ayukta ಇದೆ. ಆದರೆ ತಾವು ಕನ್‌ಫ್ಯೂಷನ್ ಮಾಡಿಕೊಳ್ಳುತ್ತಿದ್ದೀರಿ. ಲೋಕಾಯುಕ್ತಕ್ಕೆ ಅಟ್ಯಾಚ್ ಆಗಿರತಕ್ಕ ಐಜಿಪಿ. ವಿಂಗ್ ಇದೆ; ಲೋಕಾಯುಕ್ತ ಬೇರೆ ಇದೆ. ಹೀಗೆ ಎರಡು ವಿಚಾರಗಳು ಇವೆ.

(ಗೊಂದಲ)

ಅಧ್ಯಕ್ಷರು : ಅವರು ಇನ್ನೂ ಮುಗಿಸಿಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗ ಪ್ರಶ್ನೋತ್ತರ ವೇಳೆ ಇದೆ. ನಾನೇನು ಚರ್ಚೆ ಮಾಡುವುದಕ್ಕೆ ಹಿಂದೇಟು ಹಾಕುವುದಿಲ್ಲ. ತಮ್ಮ ಪ್ರಶ್ನೆಯಿಂದ ಉದ್ಭವಿಸಿರತಕ್ಕ ವಿಚಾರ ಉಪಯುಕ್ತವಾಗಿದ್ದರೆ ಕಾನೂನು ಚೌಕಟ್ಟಿನಲ್ಲಿ ಯಾವ ರೀತಿ ಮಾಡಬೇಕೆಂಬುದಕ್ಕೆ ಸರ್ಕಾರ ಹಿಂದೇಟು ಹಾಕುವುದಿಲ್ಲ. ಅದನ್ನು ನಾನು ತಮಗೆ ಬಿಡುತ್ತೇನೆ. I don't mind. It may be any sort of discussion on the floor of this House.

(ಗೊಂದಲ)

SRI. D.B. CHANDRE GOWDA: I seek your protection.

Mr. Speaker: Do you seek protection from Sri Gurupadappa Nagamarapalli?

Sri. D.B. Chandregowda: That is the reason why I have asked a specific question' Whether the Government takes action against the Lok Ayukta Officers who have not booked case properly?'

ಅವರ ಮೇಲೆ ಆಕ್ಷನ್ ತೆಗೆದುಕೊಂಡಿದ್ದಾರೆ? ಇವರು ಬಿಡುಗಡೆಯಾಗುತ್ತಾರೆ. ಸರ್ಕಾರ ಆ ಕಡೆ ಉಳಿಯುತ್ತದೆ. ಹಾಗಾದರೆ ಲೋಕಾಯುಕ್ತದ ಪರಿಸ್ಥಿತಿ ಏನು? That I want to know.

ಅಧ್ಯಕ್ಷರು : ನನಗೆ ಲೋಕಾಯುಕ್ತ ಸ್ಥಿತಿ ಗೊತ್ತಾಗುವುದಿಲ್ಲ. ಇನ್ನೂ ಹತ್ತು ಪ್ರಶ್ನೆ. ಉಳಿದಿದೆ. ನಾನು ಅಷ್ಟಕ್ಕೆ ಸೀಮಿತನಾಗುತ್ತೇನೆ. ಡಿಮ್ಯಾಂಡ್ಸ್ ಬಂದಾಗ ಇದರ ಮೇಲೆ ದೀರ್ಘವಾಗಿ ಚರ್ಚೆ ನಡೆಯಬಹುದು. ಈ ಶ್ರೀ ಬಸವರಾಜ್ ಅವರು ಪ್ರಶ್ನೆ ಕೇಳಲಿ.

ಉಡುಪಿ ತಾಲ್ಲೂಕು ಬ್ರಹ್ಮಾವರ ಉಪ ಖಜಾನೆ ಬಗ್ಗೆ

346-ಶ್ರೀ ಪಿ. ಬಸವರಾಜ್(ಬ್ರಹ್ಮಾವರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಉಡುಪಿ ತಾಲ್ಲೂಕು ಬ್ರಹ್ಮಾವರ ಉಪ ಖಜಾನೆಯಲ್ಲಿ ವಿಧವೆ ಮಾಸಾಶನ, ಅಂಗವಿಕಲರ ಮಾಸಾಶನ, ವೃದ್ಧಾಪ್ಯ ವೇತನ ಬಟವಾಡೆ ಸಾರ್ವಜನಿಕರಿಗೆ ದೊರೆಯದೆ ಇರುವುದು ನಿಜವಲ್ಲವೆ?

ಆ) ಈ ರೀತಿಯ ಪಿಂಚಣಿ ಸೌಲಭ್ಯಗಳನ್ನು ದೂರದ ಉಡುಪಿ ಖಜಾನೆ ಕಛೇರಿಯಿಂದ ಪಡೆಯುವುದರಿಂದ ಅನೇಕರಿಗೆ ಅನಾನುಕೂಲವಾಗುವುದು ಸರ್ಕಾರದ ಗಮನಕ್ಕೆ 'ಬಂದಿದೆಯಾ?

ಇ) ಸದರಿ ಕಛೇರಿಯಲ್ಲಿಯೇ ಪೂರ್ಣ ಪ್ರಮಾಣದ ಖಜಾನೆ ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳಲು ಸರ್ಕಾರ ಆಲೋಚಿಸಿದೆಯಾ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಹೌದು, ನಿಜ ವಿಧವಾ ಮಾಸಾಶನ, ಅಂಗವಿಕಲರ ಮಾಸಾಶನ, ವೃದ್ಧಾಪ್ಯ ವೇತನದ ಬಟವಾಡೆ ಉಡುಪಿ ಉಪ ಖಜಾನೆಯಲ್ಲಯೇ ಪಾವತಿಸಲಾಗುತ್ತಿದೆ. ಬ್ರಹ್ಮಾವರ ಉಪ ಖಜಾನೆ ಏಕ ಸದಸ್ಯ ಉಪ ಖಜಾನೆಯಾದುದರಿಂದ ಇಲ್ಲಿಂದ ಈ ಮಾಸಾಶನಗಳನ್ನು ಕಳುಹಿಸಲು ಸಾಧ್ಯವಾಗಿಲ್ಲ.

ಆ) ಗಮನಕ್ಕೆ ಬಂದಿದೆ.